**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ**

ಅಸಲು ದಾವೆ ನಂ**. 981/2016** ದಿನಾಂಕಃ **29.06.2026**

ಡಿ**.**ಡಬ್ಲೂಃ**-02**

**: ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು :**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ. KHA ರವರಿಂದಃ-**

ನಾನು 4 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಮೂಲತಃ ರಾಯಬಾಗ ತಾಲೂಕ ಗುಂಡವಾಡ ಗ್ರಾಮದವನು. ಈ ದಾವೆಯನ್ನು ಮಹಾದೇವಿ ತಳವಾರ ಎಂಬುವವರು ಹೂಡಿರುತ್ತಾರೆ. ಈ ದಾವೆಯನ್ನು 306/1ರ ಸರ್ವೆ ನಂಬರನಲ್ಲಿ ಹೂಡಿರುತ್ತಾರೆ. ಐಬತ್ತಿ ಎಂಬುವವರಿಗೆ 3 ಜನ ಮಕ್ಕಳು, ಅವರ ಹೆಸರು ಹೇಳಲಾಗುವುದಿಲ್ಲ. ಸದರಿ ಐಬತ್ತಿ ಎಂಬುವವರಿಗೆ ವಾದಿ ಹಾಗೂ 2 ರಿಂದ 4 ನೇ ಪ್ರತಿವಾದಿಯರು ಒಟ್ಟು 4 ಮಂದಿ ಮಕ್ಕಳು ಎಂದರೆ ಸಾಕ್ಷಿಯು ನನಗೆ ಮೂರು ಜನ ಹೇಳಿದ್ದರು ಎಂದು ನುಡಿಯುತ್ತಾರೆ. ಐಬತ್ತಿ ಎಂಬುವವರು ಮೃತ ಪಟ್ಟ ನಂತರ 2 ರಿಂದ 4 ನೇ ಪ್ರತಿವಾದಿಯವರು ಮಾತ್ರ ವಾರಸಾದಲ್ಲಿ ತೋರಿಸಿದ್ದಾರೆ ಎಂದರೆ ಸರಿ. ವಾದಿಯನ್ನು ಸಪ್ತಸಾಗರ ಗ್ರಾಮಕ್ಕೆ ವಿವಾಹ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಈ ದಾವೆ ಹೂಡಿದ ನಂತರ ವಾದಿಯು ಸದರಿ ಐಬತ್ತಿರವರ ಮಗಳು ಹೌದೋ ಇಲ್ಲೋ ಎಂಬ ಬಗ್ಗೆ ಚೌಕಾಶಿ ಮಾಡಿಲ್ಲ. ಸರ್ವೆ ನಂಬರ 306/1, 306/2 ಒಂದಕ್ಕೊಂದು ಹೊಂದಿಕೊಂಡಿವೆ. ಈ ಎರಡು ಜಮೀನುಗಳಲ್ಲಿ ವಾದಿಗೆ ಹಿಸ್ಸೆ ನೀಡಿದ್ದಾರೋ ಇಲ್ಲೋ ಎಂಬ ಬಗ್ಗೆ ಚೌಕಾಶಿ ಮಾಡಿಲ್ಲ.

ನನ್ನ ಪ್ರತಿವಾದ ಪತ್ರಕ್ಕೆ ಎಮ್.ಆರ್ ಕುಲಕರ್ಣಿ ಎಂಬುವವರು ಮಾಹಿತಿ ನೀಡಿರುತ್ತಾರೆ. ತಕರಾರಿನಲ್ಲಿ ವಾದಿಯು ಐಬತ್ತಿರವರ ಮಗಳು ಅಲ್ಲ ಎಂದು ಬರೆದಿದ್ದೇನೆ ಎಂದರೆ ಸರಿ. ವಾದಿಯು ಐಬತ್ತಿರವರ ಮಗಳು ಇದ್ದರೂ ಮಗಳಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಹಿಸ್ಸೆ ಹಕ್ಕನ್ನು ಮಕಟುಗೊಳಿಸುವ ಉದ್ದೇಶದಿಂದ ನಾನು ಮತ್ತು ಇತರರು ಪ್ರತಿವಾದಿಯರು ಸೇರಿ ಸುಳ್ಳು ದಾಖಲೆ ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

(ಓಂಕಾರಮೂರ್ತಿ ಹೆಚ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ.ನ್ಯಾಯಾಲಯ, ಅಥಣಿ